Docs
T.P.2

(1)

Reg no KRNN 12 — For Influential Publicity — 2-9-76

ಕೃಷ್ಣ ಮಹೋತ್ಸವ ನೆರವೇಂಸಿ ವಜ್ರಮಹೋತ್ಸವನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
ನೇ ವಜ್ರಮಹೋತ್ಸವ ವರ್ಷ

★ Satyavadi Daily, Mysore 4 ★

ಸಂಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (5 ಪೈಸೆ

ರಾಜ್ಯಾಂಗ ತಿದ್ದುಪಡಿ

ನವ ದೆಹಲಿ— 57 ವಾಕ್ಯಾಂಗಗಳನ್ನು ರಾಜ್ಯಾಂಗ ತಿದ್ದುಪಡಿ ಮಸೂದೆಯು ಲೋಕಸಭೆಯಲ್ಲಿ ಮಂಡಿಸಲಾಯಿತು — ಇದರ ಪ್ರಕಾರ ಅಧ್ಯಕ್ಷರು ಮಂತ್ರಿಮಂಡಲದ ಸಲಹೆಗೆ ಬದ್ಧರು ; ಪಾರ್ಲಿಮೆಂಟು ಮತ್ತು ಶಾಸನಸಭೆಗಳ ಅವಧಿ 5 ವರ್ಷಗಳಿಂದ 6 ವರ್ಷಗಳಿಗೆ ಹೆಚ್ಚುವುದು ; ರಾಷ್ಟ್ರ ವಿರುದ್ಧ ಪಕ್ಷಗಳು ನಿಷೇಧಿಸಲ್ಪಡುವುವು ; ಪ್ರಜೆಗಳ ಕರ್ತವ್ಯ ವಿವರಿಸಲಾಗಿರುವುದು — ರಾಜ್ಯಾಂಗದ ಎಲ್ಲಾ ವಿಧಿಗಳನ್ನೂ ತಿದ್ದುಪಡಿ ಮಾಡಲು ಪಾರ್ಲಿಮೆಂಟು ಅರ್ಹತೆ ಹೊಂದಿರುವುದೆಂದು ನ್ಯಾಯಾಂಗ ಮಂತ್ರಿ ಶ್ರೀ ಗೋಖಲೆಯವರು ಹೇಳಿದರು — ಮಸೂದೆಯನ್ನು ಕೆಲವರು ವಿರೋಧಿಸಿದರು.

★

ಅಧಿಕಾರ ಕ್ಷೇತ್ರ ಬದಲಾವಣೆ

ಬೆಂಗಳೂರು— ಮಂತ್ರಿಮಂಡಲದ ಕೆಲವು ಸದಸ್ಯರ ಅಧಿಕಾರ ಕ್ಷೇತ್ರದಲ್ಲಿ ಬದಲಾವಣೆಯಾಗಿದೆ.

○

ಅಮೇರಿಕಾ ನೆರವು

ನವ ದೆಹಲಿ— ಕುದುರೆಮುಖ ಪ್ರಾಜೆಕ್ಟಿಗೆ ಒಂದು ಅಮೇರಿಕಾ ಕಂಪೆನಿ ಕೆನಡಾ ಉದ್ಯ ಕಂಪೆನಿ ಸಹಾಯಮಾಡಲಿದೆ

○

ಲೋಕಸಭಾ ಅಧಿವೇಶನ

ನವದೆಹಲಿ— ಪಾರ್ಲಿಮೆಂಟು ರಾಜ್ಯಾಂಗ ತಿದ್ದುಪಡಿಗಳನ್ನು ಪರಾಮರ್ಶಿಸಲು ಇನ್ನು ಏಳು ವಾರಗಳನ್ನು ಸೇರಬಹುದೆನ್ನಲಾಗಿದೆ.

★

ದಿನ್ನಣಿ

ಕರ್ತವ್ಯವು ಒಬ್ಬನು ಇತರರಿಂದ ಬಯಸಕ್ಕುದುದಾಗಿದೆ — ಆಕ್ಸರ್ ವಿಲ್

ಭಿಕ್ಷಾಟನೆ ತೆಂಗೆ

ಬೆಂಗಳೂರು— ಇಂದಿನಿಂದ ಭಿಕ್ಷಾಟನೆ ತೆಂಗೆ ಜಾರಿಗೆ ಬಂದಿದ್ದು ಇದು ಹಲವು ತೆಂಗೆಗಳ ಮೇಲೆ ಸರ್ಚಾರ್ಜ್ ಆಗಿರುವುದು.

○

ಚಿನ್ನಾಭರಣ ವಶ

ಬೆಂಗಳೂರು— ಒಂದು ಕಳ್ಳಸಾಗಾಣಿಕೆ ದಾಳಿ ನಡೆಸಿ ಡಿಕ್ಲೇರು ಮಾಡದಿದ್ದ ರೂ. 2 25 ಲಕ್ಷ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡು, ಇಬ್ಬರನ್ನು ದಸ್ತಗಿರಿ ಮಾಡಿದರು.

★

ಬಲಾತ್ಕಾರವಿಲ್ಲ

ನವ ದೆಹಲಿ— ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಬಲಾತ್ಕಾರ ಉಪಯೋಗಿಸುವುದು ಸರ್ಕಾರದ ನೀತಿಯಲ್ಲವೆಂದು ಪ್ರಧಾನಿ ಇಂದಿರಾರವರು ಲೋಕಸಭೆಯಲ್ಲಿ ತಿಳಿಸಿದರು.

●

ಆತ್ಮಹತ್ಯೆ ಒಪ್ಪಂದ

ಫಿರೋಜಪುರ— ನಾಲ್ಕು ಕಾಲೇಜು ಹುಡುಗಿಯರು ಆತ್ಮಹತ್ಯೆ ಒಪ್ಪಂದ ಮಾಡಿಕೊಂಡು ರಾಜಸ್ಥಾನ ನಾಲೆಗೆ ಧುಮುಕಿ ಪ್ರಾಣಬಿಟ್ಟರು — ಪ್ರಿನ್ಸಿಪಾಲರು ಫೀಜನ್ನು ರಿಯಾಯಿತಿ ಕೊಡಲಿಲ್ಲವೆಂದೇ ಇದಕ್ಕೆ ಕಾರಣವೆಂದು ಚೀಟಿ ಬರೆದಿಟ್ಟಿದ್ದರು.

●

ಮುಖ್ಯ ಮಂತ್ರಿಗಳವರ ಮನವಿ

ಬೆಂಗಳೂರು— ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು, ತಾ ॥ 5 ರಂದು ಮಾಜಿ ಭಾರತಾಧ್ಯಕ್ಷ ಡಾ ॥ ರಾಧಾಕೃಷ್ಣರ ಜನ್ಮದಿನ, ಅವರ ಸವಿ ನೆನಪಿನ ಉಪಾಧ್ಯಾಯರ ದಿನಾಚರಣೆ ಸಂಬಂಧದಲ್ಲಿ ಇತ್ತೀಚಿನ ಮನವಿಯಲ್ಲಿ ಸಾರ್ವಜನಿಕರು ಉಪಾಧ್ಯಾಯರ ಕಲ್ಯಾಣ ನಿಧಿಗೆ ಉದಾರ ಧನಸಹಾಯ ಮಾಡಲು ವಿನಂತಿಸಿರುವರು.

ಪ್ರಕಟಣೆ

ನಂ ಡಿಡಿ ಪಿಜೆಟಿ ಇಎಂಟಿ / 76-77 ತಾ. 18 ನೇ ಆಗಸ್ಟ್ 1976

ಪೆಡ್ಡಾಲ್‌ನಲ್ಲಿ ಸೂಚಿಸಲಾಗಿರುವ ಕೆಲಸಗಳಿಗಾಗಿ ಕಂಟ್ರಾಕ್ಟರ್‌ಗಳಿಂದ ಅದರ ಹೆಸರು ಬರೆದ ಮತ್ತು ಟೆಂಡರ್‌ದಾರರಿಂದ ಸಕಾಲದಲ್ಲಿ ಸಹಿ ಮಾಡಲಾದ ಮೊಹರಾದ ಟೆಂಡರ್‌ಗಳನ್ನು ಮೈಸೂರಿನಲ್ಲಿರುವ, ಪ್ರಾಜೆಕ್ಟ್ ಟೈಗರ್‌ನ, ಡೆಪ್ಯುಟಿ ಡೈರೆಕ್ಟರ್‌ರಿಂದ 16 ನೇ ಸೆಪ್ಟೆಂಬರ್ 1976 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸಲ್ಪಡುವುವು ಸ್ವೀಕರಿಸಲಾದ ಟೆಂಡರ್‌ಗಳನ್ನು ಅದೇ ದಿನ 4-30 ಗಂಟೆಗೆ ಟೆಂಡರ್‌ದಾರರು ಅಥವಾ ಅವರ ಪ್ರತಿನಿಧಿಗಳ ಮುಂದೆ ಸಂದರ್ಭಾನುಸಾರ ಒಡೆಯಲಾಗುವುದು. ಕೆಲಸಗಳನ್ನು ಮುಗಿಸಲು ಕಾಲಾವಧಿ 28-2-77

ಪೆಡ್ಡಾಲ್

ಸೀ ನಂ	ಕೆಲಸದ ಹೆಸರು	ಅಂದಾಜು ಮೊತ್ತ ರೂ.	ಇ ಎಂ ಡಿ ರೂ
1	ದೊಬ್ಬಗೋಟಿಯ ಮಾರ್ಗವಾಗಿ ಕುಂಬಾರಕಟ್ಟೆ ಬಸವನಹಟ್ಟಿ ರಸ್ತೆಯ ನಿರ್ಮಾಣ — 10 ಕಿಲೋಮಿಟರು	10.806	540
2	ಸೀಬಗೆರೆ ಸೀಗೇಕಟ್ಟೆ, ಹಲಸೂರುಗದ್ದೆ ರಸ್ತೆ ನಿರ್ಮಾಣ — 10 ಕಿಲೋಮೀಟರು	6.862	345
3	ಮರದಕಟ್ಟೆ ಮಾರ್ಗವಾಗಿ ಚನ್ನೇನಹಳ್ಳಿ–ಮೂಲೆರೂಳೆ ರಸ್ತೆ ನಿರ್ಮಾಣ — 10 ಕಿಲೋಮೀಟರು	10,920	545
4	ಬೈಲದಕುಪ್ಪೆ ಮದ್ದೂರು ರಸ್ತೆ — 18 ಕಿಲೋ ಮೀಟರು	19,056	950
5	ಚಾಡಳ್ಳಿ – ಬೈಂಗದ್ದೆ – ಬನ್ನೂರು ಗದ್ದೆ ರಸ್ತೆ ನಿರ್ಮಾಣ — 11 ಕಿಲೋಮೀಟರು	11.016	550
6	ಅಲಂಗಿಕಟ್ಟೆಯಿಂದಗುಂಡ್ರೆ ವರೆಗೆ ರಸ್ತೆ ನಿರ್ಮಾಣ — 8 ಕಿಲೋ ಮೀಟರು	8,064	400

ಸೂಚನೆ : ಪ್ರತಿ ಕೆಲಸದ ಎದುರು ಸೂಚಿಸಿರುವ ಅರ್ನೆಸ್ಟ್ ಹಣ ಠೇವಣಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ಗೆ ಪಾವತಿ ಮಾಡಬೇಕು ಮತ್ತು ದಿವ್ಯ ಪ್ರತಿ ಚಲನ್‌ನನ್ನು ಟೆಂಡರ್‌ನೊಡನೆ ಸೇರಿಸಬೇಕು ಅಥವಾ ಮೈಸೂರಿನಲ್ಲಿರುವ, ಪ್ರಾಜೆಕ್ಟ್ ಟೈಗರ್ ಡೆಪ್ಯುಟಿ ಡೈರೆಕ್ಟರ್‌ರವರ ಹೆಸರಿನಲ್ಲಿ ಪೆಡ್ಡಾಲ್ ಬ್ಯಾಂಕ್‌ನಿಂದ ಪಡೆದ ಬ್ಯಾಂಕ್ ಡ್ರಾಫ್ಟ್ ಒಂದನ್ನು ಲಗತ್ತಿಸಬೇಕು

2 ಕೆಲಸದ ಎಲ್ಲಾ ದಿನಗಳಲ್ಲಿ ಕೆಲಸದ ವೇಳೆಗಳಲ್ಲಿ 16-9-76 ರಂದು ಮಧ್ಯಾಹ್ನ 1 ಗಂಟೆ ವರೆಗೆ ರೂ 5 ಇದರೊಡನೆ ಮಾರಾಟ ತೆರಿಗೆ ಮತ್ತು ಅರಣ್ಯ ಅಭಿವೃದ್ಧಿ ತೆರಿಗೆ ಪಾವತಿ ಮಾಡಿದಲ್ಲಿ ಈ ಕಚೇರಿಯಿಂದ ಟೆಂಡರ್ ಫಾರಂಗಳನ್ನು ಕೊಡಲಾಗುವುದು.

3 ಯಾವುದೇ ವಿವರಗಳಿಗೆ ಮೈಸೂರಿನಲ್ಲಿರುವ, ಪ್ರಾಜೆಕ್ಟ್ ಟೈಗರ್‌ನ ಡೆಪ್ಯುಟಿ ಡೈರೆಕ್ಟರ್ ಇವರೊಡನೆ ದಯವಿಟ್ಟು ಕೆಲಸದ ಹಿಲ್ಲ ದಿನಗಳಲ್ಲಿ ವ್ಯವಹರಿಸಬಹುದು.

ಸಹಿ/– ಡೆಪ್ಯುಟಿ ಡೈರೆಕ್ಟರ್, ಪ್ರಾಜೆಕ್ಟ್ ಟೈಗರ್, ಮೈಸೂರು.

ಪ್ರಕಟಣೆ—

ಜೀತ ನಿರ್ಮೂಲನ ಕಾನೂನು (Bonded Labour Abolition Act)

ಶ್ರೀ ವೆಂಕಟೇಶ ಕುಲಕರ್ಣಿಯವರ ವಿಶ್ವಾಸಪೂರಿತವಾದ ಶ್ರಮದಿಂದ ಕನ್ನಡದಲ್ಲಿ ಅನೇಕ ಕಾನೂನು ನಿಯಮಾವಳಿಗಳು ಪ್ರಕಟವಾಗುತ್ತಿರುವುದು ತಿಳಿದ ವಿಷಯ.

ಭಾರತ ದೇಶದಾದ್ಯಂತ ಬಹಳ ಕಾಲದಿಂದ ನೆಲೆಸಿಕೊಂಡಿದ್ದು, ಬಹು ಜನರಿಗೆ ಕಂಟಕವಾಗಿದ್ದ, ಜೀತ ಪದ್ಧತಿಯನ್ನು ನಿರ್ಮೂಲನಮಾಡುವುದಕ್ಕಾಗಿ ಸರಕಾರದವರು 1975 ನೇ ಅಕ್ಟೋಬರ್‌ನಿಂದ ಕಾನೂನೊಂದನ್ನು ಜಾರಿಗೆ ತಂದಿರುವರು ; ಇದರಿಂತೆ ಆ ದುಷ್ಟ ಪದ್ಧತಿಯು ನಿವಾರಣೆಯಾಗಿರುತ್ತೆ. ಯಾರೇ ಆಗಲಿ ಯಾವ ಕಾರಣದಿಂದಲೇ ಆಗಲಿ ಜೀತ (ಗುಲಾಮಗಿರಿ) ಪದ್ಧತಿಯನ್ನು ಪಾಲಿಸಲು ಅವಕಾಶವಿಲ್ಲ ಮತ್ತು ಹಾಗೇನಾದರು ಪಾಲಿಸಿದ್ದಾದರೆ ಕಾನೂನು ಪ್ರಕಾರ ಶಿಕ್ಷಾರ್ಹರಾಗುತ್ತಾರೆ, ಎಂದು ಇದರ ಸಾರಾಂಶ. ಕಾನೂನಿನ ನಿಬಂಧನೆಗಳಾವುವು, ಹೇಗೆ ಅವುಗಳ ವಿಸ್ತರಣೆ, ಕಾರ್ಯಗತ ಮಾಡುವ ಸರ್ಕಾರಿ ಅಧಿಕಾರಿಗಳ ಕರ್ತವ್ಯವೇನು, ಜನರು ತಿಳಿದುಕೊಳ್ಳಬೇಕಾದ ವಿಚಾರವೇನು, ಮುಂತಾದ ಎಲ್ಲಾ ವಿವರಗಳೂ ಜೀತ ನಿರ್ಮೂಲನದ ವಿಧಿನಿಯಮಗಳಲ್ಲಿ ಅಡಗಿರುತ್ತವೆ.

ಇದನ್ನು ಶ್ರೀ ವೆಂಕಟೇಶ ಕುಲಕರ್ಣಿಯವರು ಕನ್ನಡದಲ್ಲಿ ಪ್ರಕಟಣೆ ಮಾಡಿ ಪ್ರಜಾಕೋಟಿಯ ಮನ್ನಣೆಗೆ ಅರ್ಹರಾಗಿರುತ್ತಾರೆ ; ಸ್ತುತ್ಯಾರ್ಹ ವಿಷಯ. ಇದರಲ್ಲಿ ಎಲ್ಲಾ ನಿಯಮಾವಳಿಗಳನ್ನೂ ಟೀಕೆ ಟಿಪ್ಪಣಿಗಳನ್ನೂ ಸೇರಿಸಿರುವುದು ಗಮನಾರ್ಹವಾಗಿದೆ.

Help The 'Gorakshana'

—Humanitarian Propoganda Monthly....

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ " ಸತ್ಯವಾದಿ " ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

SHAKTI SUDHA

A Superb Tonic

ಪುಟ್‌ಲಾಂಡ್ 3976 ರಿಂದ

ಅಮೋಘ ಆರಂಭ

ಡಸ್ ನಂಬರಿ

ಹಿಂದಿ

ಕಲರ್

ಮನೋಜ್ ಕುಮಾರ್ ಹೇಮಮಾಲಿನಿ
ಪ್ರೇಮನಾಥ್ ಪ್ರಾಣ್ ಮುಂತಾದವರ ಅಭಿನಯ

ದಿನ 4 ಪ್ರದರ್ಶನಗಳು

ಅಪೆರಾ 3976 ರಿಂದ

ಸೆಕ್ರೆಟರಿ

ಎ. ನಾಗೇಶ್ವರರಾವ್ ವಾಣಿಶ್ರೀ ಅಭಿನಯ

ತೆಲುಗು

ಪ್ರತಿ ದಿನ 3 ಪ್ರದರ್ಶನಗಳು

ಗೋರಕ್ಷಣೆ'ಕ್ಕೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, " ಗೋರಕ್ಷಣ ' ವು ತನ್ನ ಬೆಳ್ಳಿ ಹಬ್ಬ ನೆರವೇರಿಸಿರುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, ' ಗೋರಕ್ಷಣ " ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

' ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ. ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

Contribute Liberally to the National Defence Fund

Edited Printed and Published by Dharmaprachaaranirata M S. Krishna Rao Proprietor at the Satyavadi Press, Chamarajapuram Mysore 4